ಆಗಬೇಕು, ಇದರಲ್ಲಿ ಒಂದು ಇಕ್ಕಟ್ಟು ಕಂಡು ಬರುತ್ತಿದೆ. ಅಲ್ಲಿ ಲೆಕ್ಕ ಪರಿಶೋಧನೆಯಾಗದೆ, ಡಿವಿಡೆಂಡ್ ಡಿಕ್ಲೇರ್ ಮಾಡುವುದಕ್ಕೆ ಆಗುವುದಿಲ್ಲ. ಲೆಕ್ಕ ಪರಿಶೋಧನೆಯಾದರೂ ಸರ್ವ ಸದಸ್ಯರ ಸಭೆ ನಡೆಯದೇ ಇದ್ದರೆ, ಡಿವಿಡೆಂಡ್ ಡಿಕ್ಲೇರ್ ಮಾಡುವುದಕ್ಕೆ ಆಗುವುದಿಲ್ಲ. ಹೀಗೆ ಆಗಿ ಏನೋ ಸ್ವಲ್ಪ ಅಸ್ತವ್ಯಸ್ತತೆ ಅಲ್ಲಿ ಕಾಣುತ್ತಾ ಇದೆ. ದಯವಿಟ್ಟು ಇದನ್ನು ತುರ್ತಾಗಿ ಸರಿಪಡಿಸಲು ಏನು ಕ್ರಮ ಅವರು ಕೈಗೊಳ್ಳುತ್ತಾರೆಂದು ತಮ್ಮ ಮೂಲಕ ನಾನು ಕೇಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ಅವರು ಹೇಳಿರುವ ಬಗ್ಗೆ 1992-93, 1993-94ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಏನು ನಡೆಯಬೇಕಾಗಿತ್ತೋ ಅದನ್ನು ಸರ್ಕಾರ ಮುಂದಕ್ಕೆ ಹಾಕಿತು. ನಮ್ಮ ಇಲಾಖೆಗೆ ಅದನ್ನು ನಡೆಸಲು ಬರುವುದಿಲ್ಲ. ಸಹಕಾರಿ ಇಲಾಖೆ ಈ ಮಹಾಸಭೆಯನ್ನು ನಡೆಸಲು ತೀರ್ಮಾನ ತೆಗೆದುಕೊಂಡ ತಕ್ಷಣ ಒಕ್ಕೂಟದ ಮಹಾಸಭೆಯಲ್ಲಿ ಒಪ್ಪಿಗೆ ಪಡೆದು ತಕ್ಷಣ ಏನು ಲಾಭ ಬಂದಿರುತ್ತದೋ ಅದರಲ್ಲಿ ಶೇರುದಾರರಿಗೆ ಡಿವಿಡೆಂಡ್ ಕೊಡುವುದಕ್ಕೆ ಬದ್ದರಿದ್ದೇವೆ. ಈ ಬಗ್ಗೆ ನಾನೂ ಕೂಡ ಸಂಬಂಧಪಟ್ಟವರೊಡನೆ ಮಾತನಾಡಿ ತಕ್ಷಣ ಶೇರುದಾರರಿಗೆ ಡಿವಿಡೆಂಡ್ ಕೊಡಲು ಕ್ರಮ ಕೈಗೊಳ್ಳುತ್ತೇನೆ. ಅದೂ ಅಲ್ಲದೆ ಅವರು ಹೇಳಿದ ಪ್ರಕಾರ ಉತ್ತರವನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. 1994-95ನೇ ಸಾಲಿಗೆ ಆಡಿಟ್ ಆಗಿದೆ ಆದರೆ ವರದಿ ಬಂದಿಲ್ಲ. 1995-96ನೇದ್ದು ಆಡಿಟ್ ಆಗಬೇಕಾಗಿದೆ. ಈ ಮೂರು ವರ್ಷದಲ್ಲಿ ಸರ್ಕಾರದ ಅವಧಿಯಲ್ಲಿ ಅದು ಲಾಭದಲ್ಲಿ ನಡೆದಿದೆ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಏಕೆ ಇದು ತಡವಾಗಿದೆ ಎನ್ನುವುದು ಅವರಿಗೆ ಗೊತ್ತಿದೆ.1992-93 ಹಿಂದೆ ಅವರು ಈ ಮನೆಯ ಸದಸ್ಯರಾಗಿದ್ದರು. ಈ ಬಗ್ಗೆ ನಾನು ಸಹಕಾರಿ ಮಂತ್ರಿಗಳ ಜೊತೆಗೆ ಮಾತನಾಡುತ್ತೇನೆ. ಅವರು ಮಹಾಸಭೆಗೆ ಒಪ್ಪಿಗೆ ಕೊಟ್ಟ ತಕ್ಷಣ ರೈತರಿಗೆ ಏನು ಡಿವಿಡೆಂಡ್ ಕೊಡಬೇಕೋ ಅದನ್ನು ಕೊಡಲು ಸರ್ಕಾರ ಬದ್ಧವಾಗಿದೆ. ಅದನ್ನು ಮಾಡುತ್ತದೆ.

ಅರಕಲಗೂಡು ಲೋಕೋಪಯೋಗಿ ಉಪವಿಭಾಗ ಮುಂದುವರಿಕೆ.

195 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ/

1) *ಅರಕಲಗೂಡು ಲೋಕೋಪಯೋಗಿ ಉಪ ವಿಭಾಗವನ್ನು ಮುಂದುವರಿಸುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?*

2) *ಮುಂದುವರಿಸಲು ಇರುವ ತೊಂದರೆಗಳೇನು ?*

3) *ಮುಂದುವರಿಸುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

1) ಲೋಕೋಪಯೋಗಿ ಉಪ ವಿಭಾಗ, ಅರಕಲಗೂಡು ಇಲ್ಲಿನ ಸಣ್ಣ ನೀರಾವರಿ ಕಾರ್ಯ ಭಾರವನ್ನು ಗಮನಿಸಿ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿರುವುದರಿಂದ ಈ ಬಗ್ಗೆ ಕೂಲಂಕು

ಷ್ಟಾಗಿ ಪರಿಶೀಲಿಸಿ ಸದರಿ ಉಪ ವಿಭಾಗವನ್ನು ಸಣ್ಣ ನೀರಾವರಿ ಉಪ ವಿಭಾಗವನ್ನಾಗಿ ಮುಂದುವರಿಸಿ 29.1.97ರಂದು ಆದೇಶ ಹೊರಡಿಸಲಾಗಿದೆ. ಹೊಸದಾಗಿ ಲೋಕೋಪಯೋಗಿ ಇಲಾಖೆ ಉಪ ವಿಭಾಗವನ್ನು ಸೃಜಿಸಿ ಇಲ್ಲಿ ಉಪ ವಿಭಾಗವನ್ನು ಪ್ರಾರಂಭಿಸುವ ಯೋಜನೆ ಇದೆ.

2) ಹೊಸದಾಗಿ ಉಪ ವಿಭಾಗವನ್ನು ಸೃಜಿಸಿ, ಇಲ್ಲಿ ಉಪ ವಿಭಾಗವನ್ನು ತೆರೆಯಲಾಗುವುದು.

3) ಮೇಲ್ಕಂಡ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೇ, ಈ ಪ್ರಶ್ನೆಯ ನಾನು ಕಳೆದ 6 ತಿಂಗಳಿಂದ 3ನೇ ಬಾರಿ ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಾ ಇದ್ದೇನೆ. ಸುಮಾರು 20 ದಿವಸಗಳ ಹಿಂದೆ ಕೂಡ ಅಧ್ಯಕ್ಷರು ತಮ್ಮ ಪೀಠದಲ್ಲಿ ಕುಳಿತಿದ್ದಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ, ಲೋಕೋಪಯೋಗಿ ಉಪ ವಿಭಾಗವನ್ನು ಮುಂದುವರಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಈ ಹಿಂದೆ ಸಣ್ಣ ನೀರಾವರಿ ಉಪ ವಿಭಾಗಗಳ ಕೆಲಸಗಳನ್ನು ಲೋಕೋಪಯೋಗಿ ಉಪ ವಿಭಾಗಗಳು ನೋಡಿಕೊಳ್ಳುವಂತಹ ಕ್ರಮವನ್ನು ರೂಪಿಸಿಕೊಂಡಿತ್ತು. ಅಂದರೆ, ಸುಮಾರು6 ತಿಂಗಳ ಹಿಂದೆ59 ಲೋಕೋಪಯೋಗಿ ಉಪ ವಿಭಾಗಗಳನ್ನು ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಪರಿವರ್ತನೆ ಮಾಡಿದರು. ಮತ್ತೆ ತದನಂತರ ಸುಮಾರು ಒಂದು ತಿಂಗಳ ಹಿಂದೆ 59ರ ಪೈಕಿ 8ನ್ನು ಮಾತ್ರ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಮುಂದುವರೆಸಿ ಇನ್ನು ಉಳಿದ51 ಉಪ ವಿಭಾಗಗಳನ್ನು ಲೋಕೋಪಯೋಗಿ ಉಪ ವಿಭಾಗಗಳನ್ನಾಗಿ ಮುಂದುವರೆಸಿಕೊಂಡು ಹೋಗಿದ್ದಾರೆ. ಇದರಿಂದಾಗಿ ರಸ್ತೆಗಳ ನಿರ್ವಹಣೆ ಕೆಲಸ ಸರಿಯಾಗಿ ಆಗುತ್ತಾ ಇಲ್ಲ. ಈ ಲೋಕೋಪಯೋಗಿ ಉಪ ವಿಭಾಗಗಳನ್ನು ಸಣ್ಣ ನೀರಾವರಿಗೆ ಸೇರಿಸಿ ಬಿಟ್ಟಿದ್ದಾರೆ. ಇದರಲ್ಲಿ ನಮ್ಮದನ್ನು ತೆಗೆದುಕೊಂಡು ಹೋಗಿ ಹೊಳೆನರಸೀಪುರಕ್ಕೆ ಸೇರಿಸಿಬಿಟ್ಟಿದ್ದಾರೆ. ನಮ್ಮ ತಾಲ್ಲೂಕನ್ನು ತೆಗೆದುಕೊಂಡು ಹೊಳೆನರಸೀಪುರ ಪಿ.ಡಬ್ಲ್ಯೂ.ಡಿ. ಉಪ ವಿಭಾಗಕ್ಕೆ ಸೇರಿಸುವುದರ ಬದಲು, ಹೊಳೆನರಸೀಪುರವನ್ನು ತಂದು ಅರಕಲಗೂಡು ಪಿ.ಡಬ್ಲ್ಯೂ.ಡಿ ಉಪ ವಿಭಾಗಕ್ಕೆ ಸೇರಿಸಿದರೆ ನಿಮ್ಮ ಆದೇಶ ಬಹಳ ಚುರುಕಾಗಿ ಆಗುತ್ತಿತ್ತು. ಏಕೆ ಈ ರೀತಿ ಕ್ರಮ ಕೈಗೊಳ್ಳಲಿಲ್ಲ? ಹೊಳೆನರಸೀಪುರವನ್ನು ತಂದು ಅರಕಲಗೂಡು ಪಿ.ಡಬ್ಲ್ಯೂ.ಡಿ. ಸಬ್ ಡಿವಿಜನ್‌ಗೆ ಸೇರಿಸಿ ಬಿಟ್ಟರೆ, ಆಗ ನೀವು ಸ್ವಲ್ಪ ಬೇಗ ಕಾರ್ಯೋನ್ಮುಖರಾಗಿ ಆದೇಶ ಹೊರಡಿಸುತ್ತೀರಿ. 6 ತಿಂಗಳಿಂದ ಅಲ್ಲಿ ಕೆಲಸ ಸ್ಥಗಿತಗೊಂಡಿದೆ. 6 ತಿಂಗಳ ಹಿಂದೆ ಆ ಪಿ.ಡಬ್ಲ್ಯೂ.ಡಿ ಸಬ್ ಡಿವಿಜನ್‌ನನ್ನು ಮೈನರ್ ಇರಿಗೇಷನ್ ಸಬ್ ಡಿವಿಜನ್ನಾಗಿ ಪರಿವರ್ತನೆ ಮಾಡಿದಿರಿ; ಪರಿವರ್ತನೆ ಮಾಡಿ ಚಾರ್ಜ್ ಕೊಟ್ಟರು. ಚಾರ್ಜ್ ಕೊಟ್ಟ ಮೇಲೆ ಸರ್ಕಾರದ ವತಿಯಿಂದ ಸ್ಟೇ ಮಾಡಿದಿರಿ. ಸ್ಟೇ ಆದಮೇಲೆ6 ತಿಂಗಳಿಂದ ಕೆಲಸ ಸ್ಥಗಿತವಾಯಿತು. ಯಾರು ಈ ಸಬ್ ಡಿವಿಜನ್ ಕೆಲಸ ಮಾಡುತ್ತಾ ಇದ್ದಾರೆ ಹೇಳಿ. ಚಾರ್ಜ್ ಕೊಟ್ಟಿದ್ದಾರೆ. ಸ್ಟೇ ಮಾಡಿದಿರಿ. ಆದರೆ, ಕೆಲಸವಾಗುತ್ತಾ ಇಲ್ಲ. ಅದನ್ನು ಪಿ.ಡಬ್ಲ್ಯೂ.ಡಿ ಸಬ್ ಡಿವಿಜನ್ನಾಗಿ ಮುಂದುವರೆಸಿ ಅಂದರೆ 59ರಲ್ಲಿ 51ನ್ನು ಮುಂದುವರೆಸಿ ಅರಕಲಗೂಡು ಮತ್ತಿತರ 7 ಸಬ್ ಡಿವಿಜನ್‌ಗಳನ್ನು ಮೈನರ್ ಇರಿಗೇಷನ್ ಸಬ್ ಡಿವಿಜನ್‌ಗಳಾಗಿ ಮುಂದುವರೆಸಿದ್ದೀರಿ, ಅದು ಯಾರ ಹಿತಕ್ಕಾಗಿ ನನಗನ್ನಿಸುತ್ತದೆ. ಇದು ಜನರ

ಹಿತಕೋಸ್ಕರ ಅಲ್ಲ. ರಸ್ತೆಗಳ ಸುಧಾರಣೆಗಾಗಿ ಅಲ್ಲ; ನಿಮ್ಮ ಮಂತ್ರಿಗಳಿಗೆ ಒಂದೊಂದು ಇಲಾಖೆಗಳು ಒಬ್ಬೊಬ್ಬರ ಅಧೀನದಲ್ಲಿ ಇರಬೇಕೆಂದು ಮಾಡಲಾಗಿದೆ. ಇದರ ಬಗ್ಗೆ 3 ಸಾರಿ ಪ್ರಸ್ತಾಪ ಮಾಡಿದರೂ ನೀವು ಇದನ್ನು ಮಾಡಲಿಲ್ಲವೆಂದರೆ, ಸರ್ಕಾರ ಜೀವಂತವಾಗಿದ್ದೆವೋ ಇಲ್ಲವೋ ಸತ್ತಿದೆಯೋ ಎಂದು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಉಪಾಧ್ಯಕ್ಷರೇ, ಸಣ್ಣ ನೀರಾವರಿ ಇಲಾಖೆಗೆ 59ರ ಉಪ ವಿಭಾಗಗಳನ್ನಾಗಿ ಮಾಡಬೇಕು ಎಂದು ತೀರ್ಮಾನ ಕೈಗೊಂಡಿದ್ದು. ಮೊದಲು ಕೈಗೊಂಡ ಆ ತೀರ್ಮಾನದಂತೆ8 ವಿಭಾಗದಲ್ಲಿ ನೀರಾವರಿ ಇಲಾಖೆ ವಿಭಾಗಗಳಾಗಿ ಕೂಡಲೇ ಪರಿವರ್ತನೆಯಾಯಿತು. ಹೀಗೆ ಪರಿವರ್ತನೆ ಆದಾಗ, ಅನೇಕರು ನಮ್ಮ ವಿಧಾನಸಭೆ ಸದಸ್ಯರು ಆಕ್ಷೇಪಗಳನ್ನು ವ್ಯಕ್ತಪಡಿಸಿದ ಮೇಲೆ ಆದರ ಗುರಿ ಒಂದು ಹೊಸ ವ್ಯವಸ್ಥೆಯನ್ನು ಮಾಡಬೇಕು ಎನ್ನುವಂಥ ಗುರಿಯನ್ನು ಇಟ್ಟುಕೊಂಡು ಮತ್ತು ಎಲ್ಲರ ಹಿತದೃಷ್ಟಿಯಿಂದ, ಸಣ್ಣ ನೀರಾವರಿ ಇಲಾಖೆ ಹಿತದೃಷ್ಟಿಯಿಂದ, ಮತ್ತು ಕಟ್ಟಡ ಮತ್ತು ಸಂಪರ್ಕ ಹಿತದೃಷ್ಟಿಯಿಂದ ಈ ಇಲಾಖೆಗಳನ್ನು ಸರಿಪಡಿಸಲು ಉಪ ವಿಭಾಗಗಳನ್ನಾಗಿ ಸರಿಪಡಿಸಬೇಕು ಎನ್ನುವಂಥ ವಿಚಾರಕ್ಕೆ ಬಂತು, ಹಾಗೆ ಈ ವಿಚಾರಕ್ಕೆ ಬಂದಾಗ ಮೊದಲು ತಮಗೆ ಉತ್ತರ ಕೊಟ್ಟ ಹಾಗೆ 8 ವಿಭಾಗಗಳನ್ನು ಪರಿವರ್ತನೆ ಮಾಡಿ, ಕಟ್ಟಡ ಮತ್ತು ಸಂಪರ್ಕ ಇಲಾಖೆಯಾಗಿ ಮುಂದುವರೆಯುತ್ತದೆ ಎನ್ನುವ ಮಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಈ 8 ವಿಭಾಗಗಳು ಎಲ್ಲಿ ನೀರಾವರಿ ವಿಭಾಗಗಳಾಗಿ ಪರಿವರ್ತನೆಗೊಂಡಿವೆ. ಅಲ್ಲಿ ಕಟ್ಟಡ ಮತ್ತು ಸಂಪರ್ಕ ವಿಭಾಗದ 8 ವಿಭಾಗಗಳನ್ನು ಅಲ್ಲೇ ಪ್ರಾರಂಭ ಮಾಡಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈಗಾಗಲೇ ಮಾಡಿರುವ 8 ಉಪ ವಿಭಾಗಗಳಲ್ಲಿ ಅಲ್ಲಿಗೇ ವರ್ಗಾವರ್ಗಿ ಮಾಡುವಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇನ್ನು ಒಂದೂವರೆ ಎರಡು ತಿಂಗಳಲ್ಲಿ ಈ ಕಾರ್ಯಕ್ರಮ ಪೂರ್ಣವಾಗುತ್ತದೆ ಎಂದು ಹೇಳುತ್ತೇನೆ. ಅಷ್ಟರವರೆಗೆ ತಮ್ಮ ಪಕ್ಕದ ಕ್ಷೇತ್ರದ ಉಪವಿಭಾಗದಿಂದ ತಮ್ಮ ಭಾಗದಲ್ಲಿ ಇರುವಂಥ ಎಲ್ಲಾ ಕೆಲಸಗಳನ್ನು ಪ್ರಗತಿಯಲ್ಲಿ ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಮಾಡುತ್ತೇವೆ. ಇನ್ನು ಎರಡು ತಿಂಗಳಲ್ಲಿ ಇದಕ್ಕಾಗಿ ಈಗಾಗಲೇ ನಾವು ಆಯ್ದುಕೊಂಡಿರುವ 8 ಉಪವಿಭಾಗಗಳನ್ನೂ ಸಹಿತ ಗೊತ್ತುಪಡಿಸಿಕೊಂಡಿದ್ದೇವೆ. ಈಗ ಪಿರಿಯಾಪಟ್ಟಣ, ಮುಳಬಾಗಿಲು, ಹೆಗ್ಗಡದೇವನಕೋಟೆ, ನಂಜನಗೂಡು, ಮದ್ದೂರು, ಅರಕಲಗೂಡು, ಬೇಲೂರು, ಅರಸೀಕೆರೆ, ಇಲ್ಲಿ ನೀರಾವರಿ ಉಪ ವಿಭಾಗದ ಜೊತೆಗೆ ಮತ್ತೊಂದು ಕಟ್ಟಡ ಮತ್ತು ಸಂಪರ್ಕ ಉಪ ವಿಭಾಗಗಳನ್ನು ತೆರೆಯುವಂತೆ ವ್ಯವಸ್ಥೆ ಮಾಡುತ್ತಿದ್ದೇವೆ. ಈ ಕಾರ್ಯಗಳಿಗೆ ತಾವು ಸಹಕಾರ ನೀಡಬೇಕೆಂದು ಸನ್ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೇ, ಈ ಗೊಂದಲ ಸಮಸ್ಯೆ ಸೃಷ್ಟಿಯಾಗಿ 6 ತಿಂಗಳಾಯಿತು. ಸಮಸ್ಯೆ ಬಗೆಹರಿಯುವವರೆಗೆ ರಸ್ತೆ ನಿರ್ವಹಣೆ ಮಾಡುವವರು ಯಾರು? ಇವರಿಗೆ ಹೇಳುವವರು ಯಾರೂ ಇಲ್ಲವೇ? ಮಾಡುವುದಾದರೆ ಬೇಗನೆ ಮಾಡಬೇಕು, ಹೊಳೆನರಸೀಪುರವನ್ನು ತಂದು ನಮ್ಮ ತಾಲ್ಲೂಕಿಗೆ ಸೇರಿಸಿದರೆ ಕೂಡಲೇ ಕೆಲಸ ಮಾಡುತ್ತಾರೆ. ನಮ್ಮದನ್ನೂ ತೆಗೆದುಕೊಂಡು

ಹೋಗಿ ಹೊಳೆನರಸೀಪುರಕ್ಕೆ ಸೇರಿಸಿ ಬಿಟ್ಟರೆ ಅವರು ಅಲ್ಲೇ ಕಾನ್‌ಸಂಟ್ರೇಟ್ ಮಾಡುತ್ತಾರೆ. ಈಗ ನಮ್ಮ ತಾಲ್ಲೂಕಿನ ಕೆಲಸವನ್ನು ಯಾರು ನಿರ್ವಹಣೆ ಮಾಡುತ್ತಾರೆ?

ಶ್ರೀ ಸಿ.ಎಂ. ಉದಾಸಿ : ಅರಕಲಗೂಡು ವಿಭಾಗದಲ್ಲಿ ನೀರಾವರಿ ಉಪ ವಿಭಾಗ ಆದಾಗ, ಹೊಳೆನರಸೀಪುರದಲ್ಲಿ ಆಗಬೇಕಾದ ನೀರಾವರಿ ಕೆಲಸಕಾರ್ಯಗಳೂ ಸಹಿತ ಅರಕಲಗೂಡು ಉಪ ವಿಭಾಗದಿಂದಲೇ ನಡೆಯುತ್ತವೆ ಎಂಬುದು ತಾವು ಗಮನದಲ್ಲಿ ಇರಬಹುದು. ಹೊಳಿನರಸೀಪುರದಲ್ಲಿ ಇರುವಂಥ ಉಪ ವಿಭಾಗದಿಂದ ಕಟ್ಟಡ ಮತ್ತು ಸಂಪರ್ಕ ಕೆಲಸಕಾರ್ಯಗಳನ್ನು ನಡೆಸುವುದರ ಜೊತೆಗೆ ತಮ್ಮ ವಿಧಾನ ಸಭಾ ಕ್ಷೇತ್ರಕ್ಕೂ ಪ್ರತ್ಯೇಕವಾದ ಒಂದು ಉಪ ವಿಭಾಗವು ಎರಡು ತಿಂಗಳಲ್ಲಿ ಆಗುತ್ತಾ ಇದೆ. ಮತ್ತು ಈ ತರಹ 8 ಕ್ಷೇತ್ರಗಳಲ್ಲೂ ಆಗುತ್ತದೆ. ಆದ್ದರಿಂದ ದಯವಿಟ್ಟು ತಾವು ಸಹಕರಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಆರು ತಿಂಗಳಿನಿಂದ ಮಾಡದ್ದನ್ನು ಎರಡು ತಿಂಗಳಲ್ಲಿ ಏನು ಮಾಡುತ್ತಾರೆ? ರಸ್ತೆಗಳನ್ನು ಯಾರು ನಿರ್ವಹಣೆ ಮಾಡುತ್ತಾರೆ ಎಂದು ಹೇಳಿ, ಇಲ್ಲಿ ಕೆಲಸ ಮಾಡುವವರೇ ಇಲ್ಲ. ನಾನು ಸ್ಪಷ್ಟವಾದ ಉತ್ತರ ಹೇಳುತ್ತೇನೆ.6 ತಿಂಗಳಿನಿಂದ ನಾನು ಇದನ್ನು ಪ್ರಸ್ತಾಪ ಮಾಡಿಕೊಂಡು ಬಂದಿದ್ದೇನೆ. ಇಲ್ಲಿ ಗೊಂದಲ ಸೃಷ್ಟಿಯಾಗಿ ಕೆಲಸ ಕಾರ್ಯಗಳು ನಿಂತುಹೋಗಿವೆ.

ಉಪಾಧ್ಯಕ್ಷರು : ಎರಡು ತಿಂಗಳಲ್ಲಿ ನಿಮ್ಮ ತಾಲ್ಲೂಕಿನಲ್ಲಿ ಸಬ್ ಡಿವಿಜನ್ ಮಾಡುತ್ತೇವೆಂದು ಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಸಿ. ಎಂ. ಉದಾಸಿ : ಕೆಲಸಕಾರ್ಯಗಳು ಯಾವುದೂ ನಿಂತುಹೋಗಲಿಕ್ಕೆ ಕಾರಣ ಇಲ್ಲ. ಪ್ರಗತಿಯನ್ನು ಪರಿಶೀಲನೆ ಮಾಡಬೇಕಾದಂಥ ಕೆಲಸದಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಹೇಳಿ ತುರ್ತು ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಹಾಗೂ ಈಗಾಗಲೇ ಎಂಟು ಆಯ್ದ ಉಪವಿಭಾಗಗಳ ಬಗ್ಗೆ ನಾವು ಗಮನದಲ್ಲಿಟ್ಟುಕೊಂಡು ಹೊಸದಾಗಿ ಈ ಕ್ಷೇತ್ರದಲ್ಲಿ ಕಟ್ಟಡ ಮತ್ತು ಸಂಪರ್ಕ ವಿಭಾಗವನ್ನು ಸಹಿತ ಅವರ ಕ್ಷೇತ್ರಕ್ಕೆ ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ಸ್ಪಷ್ಟವಾಗಿ ಉತ್ತರ ಕೊಟ್ಟಮೇಲೆ ಮತ್ತೆ ಏತಕ್ಕೆ ಕೇಳುತ್ತೀರಿ? ಈಗ ಕೊಶ್ಚನ್ ಹವರ್ ಮುಗಿಯಿತು.

ಶ್ರೀ ಎ.ಟಿ. ರಾಮಸ್ವಾಮಿ : ಕಳೆದ 20 ದಿವಸದ ಹಿಂದೆ ಈ ಸದನದಲ್ಲಿ ಉತ್ತರ ಕೊಟ್ಟಿದ್ದರು ಮುಂದುವರೆಸುತ್ತೇನೆ ಎಂದು. ಈಗಲೂ ಕೂಡ ಉತ್ತರದಲ್ಲಿ ಮುಂದುವರೆಸುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ ಆದರೆ ಬೇರೆ ಹೊಸದಾಗಿ ಪಿ.ಡಬ್ಲ್ಯೂ.ಡಿ. ಸಬ್-ಡಿವಿಜನ್‌ನ್ನು ನಾವು ಸೃಷ್ಟಿಸುತ್ತೇವೆ ಎಂದು ಹೇಳಿ ಈಗಲೂ ಆರ್ಡರ್ ಇಷ್ಯೂ ಆಗಿಲ್ಲ. ಇವರಿಗೆ ಜನರ ಹಿತದೃಷ್ಟಿಯಿಲ್ಲ. ಆದ್ದರಿಂದ ಇದನ್ನು ನಾನು ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತಿದ್ದೇನೆ.

(ಸದನದಿಂದ ಮಾನ್ಯ ಸದಸ್ಯರು ನಿರ್ಗಮಿಸಿದರು).